ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)

ಸಂಖ್ಯೆ: ಕವಿಪ್ರನಿನಿ/ಬಿ16/86457/2018-19

ದಿನಾಂಕ: 23 SEP 2021

ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ)
ಕಂಪನಿ ಕಾರ್ಯಾಲಯ,
ಬೆಸ್ಕಾಂ/ಮೆಸ್ಕಾಂ/ಸೆಸ್ಕ್/ಹೆಸ್ಕಾಂ/ಜೆಸ್ಕಾಂ,
**ಬೆಂಗಳೂರು/ಮಂಗಳೂರು/ಮೈಸೂರು/ಹುಬ್ಬಳ್ಳಿ/ಕಲಬುರಗಿ.**

ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ,
ಕವಿಪ್ರನಿನಿ,
**ಬೆಂಗಳೂರು/ತುಮಕೂರು/ಮೈಸೂರು/ಹಾಸನ/ಬಾಗಲಕೋಟೆ/ಗುಲ್ಬರ್ಗಾ.**

ಮಾನ್ಯರೆ,

**ವಿಷಯ:** ಕಿರಿಯ ಪವರ್‌ಮ್ಯಾನ್ ಹಾಗೂ ಕಿರಿಯ ಸ್ಟೇಷನ್ ಪರಿಚಾರಕ ರವರುಗಳಿಗೆ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:** ಪ್ರಧಾನ ವ್ಯವಸ್ಥಾಪಕರು (ಆ ಮತು ಮಾ.ಸಂ.ಅ), ಮೆಸ್ಕಾಂ, ಮಂಗಳೂರು ರವರ ದಿನಾಂಕ: 11.06.2021 ರ ಪತ್ರ ಸಂಖ್ಯೆ: ಮೆಸ್ಕಾಂ-ಜಿಎಂಎಹೆಚ್ಂಎಡಿಎಂ/371/2021/3994/2021.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕವಿಪ್ರನಿನಿ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ಪವರ್‌ಮ್ಯಾನ್ ಹಾಗೂ ಕಿರಿಯ ಸ್ಟೇಷನ್ ಪರಿಚಾರಕ ರವರುಗಳಿಗೆ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಉಲ್ಲೇಖದ ಪತ್ರದಲ್ಲಿ ಕೋರಲಾಗಿರುತ್ತದೆ.

ಕವಿಪ್ರನಿನಿ/ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಿರಿಯ ಸ್ಟೇಷನ್ ಪರಿಚಾರಕ/ಕಿರಿಯ ಮಾರ್ಗದಾಳು ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇರ ನೇಮಕಾತಿ ಮಾಡಲಾಗಿರುತ್ತದೆ. ಕವಿಪ್ರನಿನಿ/ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ಪವರ್‌ಮ್ಯಾನ್/ಕಿರಿಯ ಸ್ಟೇಷನ್ ಪರಿಚಾರಕ ರವರುಗಳು ಮೂರು ವರ್ಷಗಳ ತರಬೇತಿ ಅವಧಿಯ ನಂತರ ವೇತನ ಶ್ರೇಣಿಯ ಆಧಾರದ ಮೇಲೆ ಎರಡು ವರ್ಷಗಳ ಪರೀಕ್ಷಾರ್ಥ ಅವಧಿಯನ್ನು ಪೂರೈಸಿರುತ್ತಾರೆ.

ಸದರಿಯವರುಗಳು ನಿಗಮದ ನಿಯಮಾನುಸಾರ ತರಬೇತಿ ಅವಧಿಯ ನಂತರ ಸದರಿಯವರುಗಳು ಒಟ್ಟು 24 ತಿಂಗಳುಗಳ ಪರೀಕ್ಷಾರ್ಥ ಅವಧಿಯನ್ನು ಪೂರೈಸಿರುವುದರಿಂದ, ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವುದಾಗಿ ಘೋಷಿಸಿದ ನೌಕರರಿಗೆ ಪ್ರಥಮ ವರ್ಷ ಮುಕ್ತಾಯಗೊಂಡ (ಪರೀಕ್ಷಾರ್ಥ ಅವಧಿ ಪ್ರಾರಂಭಗೊಂಡ ವರ್ಷ) ನಂತರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಹಾಗೂ ದ್ವಿತೀಯ ವರ್ಷ ಮುಕ್ತಾಯಗೊಂಡ ನಂತರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡಿ ವೇತನವನ್ನು

ಕಾಲ್ಪನಿಕವಾಗಿ ನಿಗಧಿಪಡಿಸಿ, ವೇತನ ನಿಗದೀಕರಣದ ತತ್ಪರಿಣಾಮದ ಆರ್ಥಿಕ ಲಾಭದ ಮೊತ್ತವನ್ನು ಪೂರ್ತಿಯಾಗಿ ಪಾವತಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)